ದ. ಕನ್ನಡ ಜಿಲ್ಲೆಯಲ್ಲಿ ಜಾನಪದ ಕ್ರೀಡೆ ಕಂಬಳಕ್ಕೆ ನೀಡುತ್ತಿರುವ ಪ್ರೋತ್ಸಾಹ

1033 - ಶ್ರೀ ಕೆ. ಜಯರಾಮ ಶೆಟ್ಟಿ (ಬೈಂದೂರು) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ?

1) ದಕ್ಷಿಣ ಕನ್ನಡ ಜಿಲ್ಲಾ ಕಾಸರಗೋಡು ಉತ್ತರ ಕನ್ನಡ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜಾನಪದ ಕ್ರೀಡೆ ಕಂಬಳ ನಡೆಯುತ್ತಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?

2) 1200 ವರ್ಷಗಳಿಷ್ಟು, ಹಿಂದೆ ಆಲೂಪ ರಾಜರ ಆಶ್ರಯದಲ್ಲಿ ನಡೆಯುತ್ತಿರುವ ಈ ಕ್ರೀಡೆ ಈಗ ಸೊರಗಿ ಅವನತಿ ಹಾದಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

3) ಹಾಗಿದ್ದಲ್ಲಿ ಇದನ್ನು ಪುನರುಜ್ಜೀವನಗೊಳಿಸುವಲ್ಲಿ ಹಾಗೂ ಪ್ರೋತ್ಸಾಹ ಕೊಡುವಲ್ಲಿ ಸರ್ಕಾರವು ತೆಗೆದುಕೊಳ್ಳಲಿರುವ ಕ್ರಮಗಳೇನು?

ಶ್ರೀ ಅಜಯ್‌ಕುಮಾರ್ ಸರ್‌ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

1) ಹೌದು

2) ಹೌದು

3) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ಕಂಬಳದ ಅಭಿವೃದ್ಧಿಗಾಗಿ ವಿಶೇಷವಾಗಿ ಪ್ರೋತ್ಸಾಹಸುತ್ತಿದೆ. ಇಲಾಖೆಯ ದಕ್ಷಿಣ ಕನ್ನಡದಲ್ಲಿ ಕಂಬಳ ಏರ್ಪಡಿಸುವ ಸಲುವಾಗಿ 1994ರಲ್ಲಿ ರೂ. 1.00 ಲಕ್ಷಗಳನ್ನು ನೀಡಿದೆ. ಇತ್ತೀಚೆಗೆ ಕಾರ್ಕಳ ತಾಲ್ಲೂಕಿನ ಮೂಡಬಿದ್ರೆ ಹೋಬಳಿ ಮಾರಪಡಿ ಗ್ರಾಮದ ಸರ್ವೆ ನಂ:137:2 ಬಿಯಲ್ಲಿ ಎರಡು ಎಕರೆ ಜಾಗವನ್ನು ಕಂಬಳ ಅಭಿವೃದ್ಧಿಗಾಗಿ ಪಡೆದಿದೆ.

ನಬಾರ್ಡ್ ಯೋಜನೆಯಡಿಯಲ್ಲಿ ಪಿ.ಡಬ್ಲ್ಯೂ.ಡಿ ಇಲಾಖೆಗೆ96-97, 97-98ನೇ ಸಾಲಿನಲ್ಲಿ ಬರಬೇಕಾದ ಹಣ

1036 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಬಾರ್ಡ್ ಯೋಜನೆಯಡಿಯಲ್ಲಿ ಪಿಡಬ್ಲ್ಯೂಡಿ ಇಲಾಖೆಗೆ 1995-96, 1996-97, 1997-98ರ ಸಾಲಿನಲ್ಲಿ ಬಂದ ಅಥವಾ ಬರಬೇಕಾದ ಮೊತ್ತವೆಷ್ಟು;

ಆ) ನಬಾರ್ಡ್ ಯೋಜನೆಗೆ ಹಣ ವ್ಯಯಕ್ಕಾಗಿರುವ ನಿಬಂಧನೆಗಳು ಏನು, ಹಾಗೂ ಯೋಜನೆಯಂತೆ ಹಣ ವಿನಿಯೋಗಿಸಲಾಗಿದೆಯೆ;

ಇ) ಯೋಜನೆಯಲ್ಲಿ ಜಿಲ್ಲಾವಾರು ನಿಯೋಜಿಸಿದ ಮತ್ತು ಖರ್ಚು ಮಾಡಿದ ಹಣದ ಮೊತ್ತವೆಷ್ಟು;

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)

ಅ) 1995-96ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಗೆ ಹಣ ಬಿಡುಗಡೆಯಾಗಿರುವುದಿಲ್ಲ. 1996-97ನೇ ಸಾಲಿನಲ್ಲಿ ಮಂಜೂರಾದ ಸಾಲ ಸಹಾಯ 122.00 ಕೋಟಿ ರೂ.ಗಳು. 1997-98ನೇ ಸಾಲಿಗೆ ನಬಾರ್ಡ್‌ನವರು ಸಾಲ ಸಹಾಯ ಧನ ನಿಗಧಿಪಡಿಸಿರುವುದಿಲ್ಲ.

ಆ) ಅಂದಾಜಿನ ಶೇ. 10 ರಷ್ಟು ರಾಜ್ಯವು ಭರಿಸಬೇಕಾಗುತ್ತದೆ. ಪ್ರಸ್ತಾವಿತ ಕಾಮಗಾರಿಗಳು ಗ್ರಾಮೀಣ ಅಭಿವೃದ್ಧಿಯ ಹಿನ್ನೆಲೆ ಇರಬೇಕು. ಇದುವರೆವಿಗೂ ಹಣ ನಿಯೋಗಿಸಿರುವುದಿಲ್ಲ.

ಇ) ಜಿಲ್ಲಾವಾರು ನಿಯೋಜಿಸಿದ ಕಾಮಗಾರಿಗಳ ಮೊತ್ತ.

1) ಬೆಂಗಳೂರು	- 736.16	11) ಕೊಡಗು	- 728.00
2) ಕೋಲಾರ	- 731.79	12) ಬೆಳಗಾಂ	- 840.00
3) ತುಮಕೂರು	- 511.25	13) ಬಿಜಾಪುರ	- 741.98
4) ಚಿತ್ರದುರ್ಗ	- 859.34	14) ಧಾರವಾಡ	- 1150.69
5) ಶಿವಮೊಗ್ಗ	- 729.19	15) ಉ. ಕನ್ನಡ	- 332.45
6) ಮೈಸೂರು	- 1007.12	16) ಗುಲ್ಬರ್ಗಾ	- 422.61
7) ಮಂಡ್ಯ	- 769.12	17) ರಾಯಚೂರು	- 963.85
8) ಹಾಸನ	- 1182.12	18) ಬೀದರ್	- 295.00
9) ಚಿಕ್ಕಮಗಳೂರು	- 381.33	19) ಬಳ್ಳಾರಿ	- 490.34
10) ದ.ಕನ್ನಡ	- 506.77		

ಯಾವುದೇ ವೆಚ್ಚವಾಗಿರುವುದಿಲ್ಲ.

ಈ) ಅವಶ್ಯಕತೆಯ ಆಧಾರದ ಮೇಲೆ ಆದ್ಯತೆ ಸಮಿತಿಯ ತೀರ್ಮಾನದಂತೆ ಕಾಮಗಾರಿಗಳನ್ನು ಪ್ರಸ್ತಾವಿಸಿದೆ.

1996-97ನೇ ಸಾಲಿನಲ್ಲಿ ಶಾಸಕರ ಅನುದಾನದಲ್ಲಿ ಶಿಫಾರಸ್ಸು ಮಾಡಿದ ಕಾಮಗಾರಿಗಳು.

1038 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1996-97ನೇ ಸಾಲಿನಲ್ಲಿ ಶಾಸಕರ ಅನುದಾನದಲ್ಲಿ ಶಿಫಾರಸ್ಸು ಮಾಡಿದ ಕಾಮಗಾರಿಗಳು*

ಆ) *ಪ್ರಾರಂಭ ಮಾಡಿದಲ್ಲಿ ಯಾವ ಯಾವ ಯಾವ ಕ್ಷೇತ್ರಗಳಲ್ಲಿ ಪ್ರಾರಂಭಿಸಲಾಗಿದೆ.*